ಹುಬ್ಬಳ್ಳಿ - ಧಾರವಾಡದಲ್ಲಿ ಉದ್ದಿಮೆಗಳ ಕಾರ್ಮಿಕರಿಗಾಗಿ ಕಾರ್ಮಿಕರ ಬಡಾವಣೆ.

986 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ) : ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡದಲ್ಲಿ ಉದ್ದಿಮೆಗಳು ಜಾಸ್ತಿ ಇದ್ದು, ಕಾರ್ಮಿಕರ ವಸತಿಗಾಗಿ ಕಾರ್ಮಿಕರ ಬಡಾವಣೆ ಪ್ರಾರಂಭಿಸಲು ಸರ್ಕಾರ ಯೋಚಿಸಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಜಮೀನು ಈ ಉದ್ದೇಶಕ್ಕಾಗಿ ನಿಗದಿಪಡಿಸಲಾಗಿದೆ?

ಇ) ಹಾಗಿಲ್ಲದಿದ್ದಲ್ಲಿ, ಈ ಬಗ್ಗೆ ಪರಿಶೀಲನೆ ಕಾರ್ಯ ಕೈಗೆತ್ತಿಕೊಳ್ಳುವುದೇ?

ಈ) ಕಾರ್ಮಿಕರ ಮಕ್ಕಳಿಗಾಗಿ ಧಾರವಾಡ ಜಿಲ್ಲೆಯಲ್ಲಿ ಶಿಕ್ಷಣ, ಇತ್ಯಾದಿ ವಿಷಯಗಳ ಬಗ್ಗೆ ಸರ್ಕಾರ ಎಷ್ಟು ಹಣವನ್ನು ಪ್ರಸಕ್ತ ಸಾಲಿಗೆ ನಿಗದಿಪಡಿಸಿದೆ?

ಉ) ಹಾಗಿದ್ದಲ್ಲಿ ಎಂದಿನಿಂದ ಅಧಿಕೃತ ಪ್ರಕಟಣೆ ಹೊರಡಿಸಲಾಗುವುದು. ಹಾಗೂ ಈ ಕುರಿತು ಸರ್ಕಾರದವರು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು) :

ಅ) ಕಾರ್ಮಿಕ ಇಲಾಖೆಯ ಮುಂದೆ ಅಂತಹ ಯೋಜನೆ ಯಾವುದು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹುಬ್ಬಳ್ಳಿ ನಗರಕ್ಕೆ ಖರ್ಚು ಮಾಡಿದ ಹಣ

987 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ, 1995-96ನೇ ಸಾಲಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹುಬ್ಬಳ್ಳಿ ನಗರಕ್ಕೆ ಖರ್ಚು ಮಾಡಿದ ಹಣವೆಷ್ಟು? ಹಾಗಿದ್ದಲ್ಲಿ ಕಾರ್ಯಕ್ರಮಗಳಾವುವು?

ಆ) ಹುಬ್ಬಳ್ಳಿ, ನಾಟ್ಯರಂಗದ ತವರೂರು ಹೀಗಿದ್ದು, ಕಲಾಭೂಮಿಕೆಗೆ ತಮ್ಮನ್ನೇ ತಾವು ಅರ್ಪಿಸಿಕೊಂಡಂತವರನ್ನು ಸರ್ಕಾರ ಗುರುತಿಸುವ ಕಲಾವಿದರ ಸಂಖ್ಯೆ ಎಷ್ಟು? ಯಾವ ಮಾನದಂಡದ ಮೇಲೆ ಅವರನ್ನು ಗುರುತಿಸಲಾಗುವುದು.

ಇ) ಹುಬ್ಬಳ್ಳಿಯಲ್ಲಿ ಎಷ್ಟು ಜನ ಮಾಸಾಶನ ಪಡೆದ ಕಲಾವಿದ : ಕಲಾವಿದೆಯರಿದ್ದಾರೆ? ಅವರಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳೇನು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) 1) 1994-95ನೇ ಸಾಲಿನಲ್ಲಿ
1,41,050.00 ರೂ.

2) 1995-96ನೇ ಸಾಲಿನಲ್ಲಿ
1,16,900.00 ರೂ.

3) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಇದರ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿಲ್ಲ.

ಇ) 1. ಕಲಾವಿದರು 41

2. ಕಲಾವಿದೆಯರು 6

ಈ ಕಲಾವಿದರಿಗೆ ಮಾಸಾಶನವಲ್ಲದೆ ಮನವಿ ಸಲ್ಲಿಸಿದ ಅರ್ಹ ಕಲಾವಿದರಿಗೆ ವೈದ್ಯಕೀಯ ಗುರುತಿನ ಚೀಟಿ ನೀಡಿ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲಾಗುತ್ತಿದೆ.

ಅನುಬಂಧ

1994-95ನೇ ಸಾಲಿನಲ್ಲಿ ಹುಬ್ಬಳ್ಳಿ ನಗರಕ್ಕೆ ಖರ್ಚು ಮಾಡಿದ ವಿವರ :

1.	ಶ್ರೀ ವಿಜಯ ಮಹಂತೇಶ ಲಲಿತಕಲಾ ಮಹಾವಿದ್ಯಾಲಯ ಹುಬ್ಬಳ್ಳಿ ಇವರಿಗೆ ರಾಜ್ಯಮಟ್ಟದ ಜಲವರ್ಣಗಳ ಕಲಾಶಿಬಿರ ಏರ್ಪಡಿಸಲು ಧನಸಹಾಯ ಹಾಗೂ (ಲಲಿತಕಲಾ ಅಕಾಡೆಮಿಯಿಂದ ಸಹಾಯಧನ ಸೇರಿ)	7000-00
2.	ಉತ್ತರ ಕರ್ನಾಟಕ ಲೇಖಕಿಯರ ಸಂಘ, ಹುಬ್ಬಳ್ಳಿ ಇವರಿಗೆ ಸಂಘದ ಚಟುವಟಿಕೆಗಳಿಗಾಗಿ ವಾರ್ಷಿಕ ಅನುದಾನ	75000-000
3.	ದಿನಾಂಕ : 25.9.95ರಂದು ಸಂಗೀತೋತ್ಸವ ಆಚರಣೆಗಾಗಿ ಕಲಾವಿದರ ಸಂಭಾವನೆಗಾಗಿ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಹಣ ಬಿಡುಗಡೆ	10000-00
4.	15.8.94ರಂದು ಸ್ವಾತಂತ್ರ್ಯೋತ್ಸವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 2 ನಾಟಕಗಳ ಪ್ರದರ್ಶನಕ್ಕೆ ಹಣ ಬಿಡುಗಡೆ	4000-00

5.	ಶ್ರೀಮತಿ ಸರಸ್ವತಮ್ಮ ಇವರಿಗೆ ಜುಲೈ 94 ತಿಂಗಳಿನಲ್ಲಿ ನಾಟಕ	2000-00
6.	ಶ್ರೀಮತಿ ಎಸ್.ಪರಿಮಳ ಇವರಿಗೆ ಸೆಪ್ಟೆಂಬರ್ 94 ತಿಂಗಳಿನಲ್ಲಿ ನಾಟಕ	2000-00
7.	ಶ್ರೀಮತಿ ಛಾಯಾದೇವಿ ಇವರಿಗೆ ಡಿಸೆಂಬರ್ 94 ತಿಂಗಳಿನಲ್ಲಿ ನಾಟಕ	2000-00
8.	ಶ್ರೀಮತಿ ಲಕ್ಷ್ಮಿದೇವಿ ಇವರಿಗೆ ಜನವರಿ 95 ತಿಂಗಳಲ್ಲಿ ನಾಟಕ	2000-00
9.	ಶ್ರೀಮತಿ ಮಲ್ಲಿಕಾರ್ಜುನ ನಾಟ್ಯ ಸಂಘ ಇವರಿಗೆ ಮಾರ್ಚ್ ತಿಂಗಳಲ್ಲಿ ನಾಟಕ	2000-00
10.	ಶ್ರೀಮತಿ ಹೀರಾಬಾಯಿ ತಡಲವಕರ್ ಇವರಿಗೆ ನಾಟಕ	4000-00
11.	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಇವರ ವತಿಯಿಂದ ದಿನಾಂಕ 30.1.95 ರಂದು ವಿಜಯ ಮಹಾಂತೇಶ್ ಲಲಿತಕಲಾ ವಿದ್ಯಾಲಯದಲ್ಲಿ ಡಾ|| ಎಂ. ವಿ. ಮಿಣಜಗಿ ಸ್ಮಾರಕ ಉಪನ್ಯಾಸ ಮಾಲೆ ಪ್ರಾತ್ಯಕ್ಷಿಕೆ ಹಾಗೂ ಕಲಾ ಪ್ರದರ್ಶನ ವ್ಯವಸ್ತೆ	16000-00
12.	ಶ್ರೀ ಜಿ.ಆಹ್. ಮಲ್ಲಾಪುರ, ಹುಬ್ಬಳ್ಳಿ ಇವರಿಗೆ ಸಮೂಹ ಕಲಾಪ್ರದರ್ಶನ ಏರ್ಪಡಿಸಲು ಧನಸಹಾಯ	3000-00
13.	ಶ್ರೀ ಗಣೇಶ್‌ಪ್ರಕಾಶ್ ಹೆಚ್ ಬಕಡೆ ಇವರಿಗೆ ಸಂಗೀತ ನೃತ್ಯ ಅಕಾಡೆಮಿಯಿಂದ ಶಿಷ್ಯವೇತನ	1800-00
14.	ಶ್ರೀ ರವೀಂದ್ರ ಕುಮಾರ್ ಜಕಾತಿ ಇವರಿಂದ ಸಂಗೀತ ಕಾರ್ಯಕ್ರಮ	2000-00
15.	ಶ್ರೀಮಡಿವಾಳ ಕುಂಬಾರ್ ಹಾಗೂ ನಿಂಗನಗೌಡ ಮುಂಡರಗಿ ಇವರಿಂದ ಜಾನಪದ ಕಾರ್ಯಕ್ರಮ	2000-00
16.	ಮಾಳ್ಕ ತಂಡದಿಂದ ಬುರ್ಜಾ ಜಂಟಲ್‌ಮನ್ ನಾಟಕ ಪ್ರದರ್ಶನ	2000-00
17.	ಕೆ.ಎಂ.ಸಿ. ವಿದ್ಯಾರ್ಥಿಗಳಿಂದ ವಿವಿಧ ಜಾನಪದ ಕಾರ್ಯಕ್ರಮಗಳು	2000-00
18.	ಸಿದ್ಧಾರೂಡ ಭಜನಾ ಮಂಡಳ, ನವಲೂರು ಇವರಿಂದ ಭಜನಾ ಕಾರ್ಯಕ್ರಮ	2250
	ಒಟ್ಟು	**1,41,050-00**

1995-96ನೇ ಸಾಲಿನಲ್ಲಿ ನಡೆಸಿದ ಕಾರ್ಯಕ್ರಮಗಳು

1.	ಶ್ರೀಮತಿ ಜಯಲಕ್ಷ್ಮಿ ಇನಾಂದಾರ ಅಭಿನಂದನಾ ಸಮಿತಿ ಹುಬ್ಬಳ್ಳಿ ಇವರಿಗೆ ಗಮಕಶಾಲೆ ಆರಂಭಿಸಲು ಧನಸಹಾಯ	50000-00
2.	ಶ್ರೀಚಂದ್ರಶೇಖರ ಶಿವಯೋಗಿ ರಾಜ್ಯಯೋಗೀಂದ್ರ ಮಹಾಸ್ವಾಮಿಗಳು ಹೊಸಮಠ ಹುಬ್ಬಳ್ಳಿ ಇವರಿಗೆ ವಿಜಯ ದಶಮಿ ಅಂಗವಾಗಿ ದಸರಾ ಮಹೋತ್ಸವ ಆಚರಣೆಗೆ ಧನಸಹಾಯ	20000-00
3.	ಶ್ರೀ ಕೇಶವ ಗುರು ಹುಬ್ಬಳ್ಳಿ ಇವರಿಗೆ ಮತ್ತು ಶ್ರೀಮತಿ ಜಯಲಕ್ಷ್ಮಿ ಇನಾಂದಾರ ಹುಬ್ಬಳ್ಳಿ ಇವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಗೌರವ ವಿತರಣೆ	5000-00
4.	ಮೂರು ಸಾವಿರ ಮಠ ಮಹಿಳಾ ಕಾಲೇಜು ಆವರಣದಲ್ಲಿ ಸಣ್ಣಾಟ ಪ್ರದರ್ಶನ	2000-00
5.	ಸಂಸ್ಕೃತಿ ಸೌರಭ, ಕಾವ್ಯಕಾವೇರಿ,ಸಂಸ್ಕೃತಿ ಸುದಿನ ಕಾರ್ಯಕ್ರಮಗಳ ಯೋಜನೆಯಡಿ ಸಾಂಸ್ಕೃತಿಕ ಕಾರ್ಯಕ್ರಮಗಳ ವ್ಯವಸ್ಥೆಗಾಗಿ	38900-00
	ಒಟ್ಟು	**1,16,900-00**

ಹೊಸನಗರ ತಾಲ್ಲೂಕಿನ ಹಸಿರು ಮಗ್ಗೆಯಿಂದ ಸಾಗರಗಳ ಸೇತುವೆ ನಿರ್ಮಾಣ

989 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶರಾವತಿ ಜಲವಿದ್ಯುತ್ ಯೋಜನೆ ಜಾರಿಯಾಗುವ ಮೊದಲು ಹೊಸನಗರ ತಾಲ್ಲೂಕು ಹಸಿರುಮಗ್ಗೆಯಿಂದ ಸಾಗರಕ್ಕೆ ಸಂಚಾರ ಯೋಗ್ಯವಾದ ಮಾರ್ಗ ಇದ್ದುದು ನಿಜವೇ?

ಆ) ಯಾವಾಗ ಈ ಮಾರ್ಗ ಮುಳುಗಡೆಯಾಯಿತು? ಈಗ ಹಸಿರುಮಗ್ಗೆಯಿಂದ ಸಾಗರಕ್ಕೆ ಯಾವ ಮಾರ್ಗ ಬಳಸಲಾಗುತ್ತಿದೆ? ಎಷ್ಟು ಕಿ.ಮೀ. ದೂರವಾಗುತ್ತದೆ?

ಇ) ಲಾಂಚ್‌ನ್ನು ಬಳಸಿದರೆ ಹಸಿರುಮಗ್ಗೆಯಿಂದ ಸಾಗರ ಎಷ್ಟು ಕಿ.ಮೀ. ದೂರವಾಗುತ್ತದೆ ಹಾಗೂ ರಸ್ತೆ ಮಾರ್ಗವನ್ನು ಬಳಸಿದರೆ ಎಷ್ಟು ಕಿ.ಮೀ. ದೂರವಾಗುತ್ತದೆ.

ಈ) ಹಸಿರುಮಗ್ಗೆ ಸೇತುವೆಯನ್ನು ನಿರ್ಮಾಣ ಮಾಡುವುದರ ಮೂಲಕ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಸರ್ಕಾರ ಯೋಚಿಸಿದೆಯೇ? ಹಾಗಿದ್ದಲ್ಲಿ ಸೇತುವೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು? ಸೇತುವೆ ನಿರ್ಮಾಣದ ಅಂದಾಜು ವೆಚ್ಚ ಎಷ್ಟು?